## ಟೂಥ್ ಪೇಸ್ಟ್ ಬೇಕೆ?!



ಎಂದಿನಂತೆ ರಾತ್ರಿ 11ಕ್ಕೆ ವಾಟ್ಸ್ಆ್ಯಪ್ ನೋಡಿ ಮಲಗುವ ಮುನ್ನ ಬ್ರಶ್ ಮಾಡಲು ಹೊರಟರೆ ಟೂಥ್ ಪೇಸ್ಟ್ ಖಾಲಿಯಾಗಿತ್ತು. ತಕ್ಷಣ ಎರಡನೇ ಪಾಳಿ ಡ್ಯೂಟಿ ಮುಗಿಸಿ ಮನೆಗೆ ಮರಳುತ್ತಿದ್ದ ನನ್ನ ಮಗನಿಗೆ, 'ಬರುತ್ತಾ ಟೂಥ್ ಪೇಸ್ಟ್ ಖರೀದಿಸಿ ತಾ' ಎಂದು ವಾಟ್ಸ್ಆ್ಯಪ್‌ನಲ್ಲಿ ಸಂದೇಶ ರವಾನಿಸಿ ಮಲಗಿದೆ.


ಮರುದಿನ ಬೆಳಿಗ್ಗೆದ್ದು ವಾಟ್ಸ್ಆ್ಯಪ್ ನೋಡುತ್ತೇನೆ... 'ಫ್ಯಾಮಿಲಿ ನಂಬರ್ ಒನ್' ಎನ್ನುವ ನಮ್ಮ ಸಂಬಂಧಿಕರ ವಾಟ್ಸ್ಆ್ಯಪ್ ಗ್ರೂಪ್‌ನಿಂದ ಮೆಸೇಜುಗಳ ಸುರಿಮಳೆ! 'ನಾನು ಈ ಬ್ರಾಂಡ್‌ನ ಪೇಸ್ಟ್ ಖರೀದಿಸಿದೆ, ಆಗುತ್ತಾ?' 'ನನ್ನ ಬಳಿ ಆ ಬ್ರಾಂಡ್‌ನ ಪೇಸ್ಟ್ ಇದೆ, ಓಕೆನಾ?' ಎಂಬುದಾಗಿ ಆರೇಳು ಸ್ಮೈಲಿ ಸಹಿತ ಸಂದೇಶಗಳು! ಕಳೆದ ರಾತ್ರಿ ಮಲಗುವ ಗಡಿಬಿಡಿಯಲ್ಲಿ ಆ ಸಂದೇಶವನ್ನು ಮಗನ ವಾಟ್ಸ್ಆ್ಯಪ್ ನಂಬರಿನ ಬದಲು ಕೊನೆಯದಾಗಿ ವೀಕ್ಷಿಸಿದ್ದ 'ಫ್ಯಾಮಿಲಿ ನಂಬರ್ ಒನ್' ಗ್ರೂಪಿಗೆ ರವಾನಿಸಿರುವ ಅವಾಂತರ ಅರಿವಾದದ್ದು ಆಗಲೇ!

**ರಮಣ್ ಶೆಟ್ಟಿ ರೆಂಜಾಳ್**

---

## ಕಮಿಷನ್

ನಾನು ಕೆಲಸ ಮಾಡುತ್ತಿದ್ದ ಅಂಚೆ ಕಚೇರಿಗೆ ಒಬ್ಬಾತ ಬಂದು, 'ಧರ್ಮಸ್ಥಳಕ್ಕೆ ನೂರು ರೂಪಾಯಿ ಕಳಿಸಬೇಕಿತ್ತು' ಎಂದು ಹೇಳಿ, ಗುಮಾಸ್ತರ ಬಳಿ ಮನಿಯಾರ್ಡರ್ ಫಾರ್ಮ್ ಮತ್ತು ಹಣ ನೀಡಿದ. ಗುಮಾಸ್ತ, 'ನೂರಕ್ಕೆ ಐದು ರೂಪಾಯಿ ಕಮಿಷನ್ ಕೊಡಬೇಕು' ಎಂದ. 'ಕಮಿಷನ್' ಎಂಬ ಶಬ್ದ ಕಿವಿಗೆ ಬಿದ್ದಾಕ್ಷಣ ಆತನಿಗೆ ಸಿಟ್ಟು ಬಂದು, 'ಏನು! ಕಮಿಷನ್? ದೇವರಿಗೆ ದುಡ್ಡು ಕಳಿಸಲೂ ಕಮಿಷನ್ ಕೊಡಬೇಕೆ? ಬೇಡ, ಹಣ ಮತ್ತು ಫಾರ್ಮ್ ವಾಪಸು ಕೊಡಿ' ಎಂದು ಹೇಳಿ ಅವೆರಡನ್ನು ತಿರುಗಿ ಪಡೆದು 'ಯಾರಾದರೂ ಧರ್ಮಸ್ಥಳಕ್ಕೆ ಹೋಗುವವರ ಬಳಿ ಕಳಿಸಿ ಕೊಡ್ತೇನೆ. ಅಬ್ಬಾ! ಕಮಿಷನ್ ಅಂತೆ ಕಮಿಷನ್' ಎಂದು ಬೈದುಕೊಳ್ಳುತ್ತ ಅಂಚೆ ಕಚೇರಿಯಿಂದ ಹೊರ ಬಿದ್ದ.



**ದೇವಿದಾಸ ಸುವರ್ಣ**